BGM/2089/18

## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\2089\2018\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:30/05/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ/ಸಾರ್ವಜನಿಕ ನೌಕರರಾದ (1) ಶ್ರೀ ರಾಜ್ ಕುಮಾರ್ ಹೆಚ್. ಭಜಂತ್ರಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರಸ್ತುತ ಕೋಟಮಚಗಿ ಗ್ರಾಮ ಪಂಚಾಯಿತಿ, (2) ಶ್ರೀಮತಿ ದೀಪಾ ಬಾಯಿ ದಿವಾಕರ್ ಕುಲಕರ್ಣಿ, ಅಧ್ಯಕ್ಷರು ಮತ್ತು (3) ಶ್ರೀ ಸುನೀಲ್ ಫಕೀರಪ್ಪ ಬಂಗಾರಿ, ಸದಸ್ಯರು, ಚಿಂಚಲಿ ಗ್ರಾಮ ಪಂಚಾಯಿತಿ ರವರ ದುರ್ನಡತೆಯ ಬಗ್ಗೆ.

**********

ಶಿವಮೊಗ್ಗ ಜಿಲ್ಲೆ, 6ನೇ ಅಡ್ಡ ರಸ್ತೆ, 6ನೇ ಮುಖ್ಯ ರಸ್ತೆ ನಿವಾಸಿಯಾದ ಶ್ರೀ. ಚಿತ್ರಪ್ಪ ಯರಬಾಳ ಹೊಸಮನೆ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಗದಗ ತಾಲ್ಲೂಕು ಪಂಚಾಯಿತಿಯ ಕಾಯನಿರ್ವಾಹಕ ಅಧಿಕಾರಿಯಾದ ಡಾ॥ ಹೆಚ್.ಎಸ್. ಜನಗಿ (ಇನ್ನು ಮುಂದೆ, '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪ/ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಚಿಂಚಲಿ ಗ್ರಾಮ ಪಂಚಾಯತ್‌ನಲ್ಲಿ 14ನೇ ಹಣಕಾಸು ಯೋಜನೆಯ ₹12 ಲಕ್ಷ ಹಣ ದುರ್ಬಳಕೆಯಾಗಿದ್ದು, ಪಂಚಾಯತ್ ಸದಸ್ಯರೇ ಗುತ್ತಿಗೆ ಕಾಮಗಾರಿ ಮಾಡಿ, ಬಿಲ್ ಪಡೆಯುತ್ತಿದ್ದಾರೆ. ಇದಕ್ಕೆಲ್ಲಾ ಎದುರುದಾರರು ನೇರ ಹೊಣೆಯಾಗಿರುತ್ತಾರೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ ಅವರು ಲಂಚ ಪಡೆದಿದ್ದಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

3. ದೂರಿಗೆ 1ನೇ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ, 2017-18ನೇ ಸಾಲಿನ 14ನೇ ಹಣಕಾಸು ಯೋಜನೆಯ 1ನೇ ಕಂತಿನಲ್ಲಿ ಹಣ ಅವ್ಯವಹಾರ ಎಸಗಿದ

ಬಗೆಗಿನ ದೂರಿನ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಗದಗ ರವರ ನಿರ್ದೇಶನದನ್ವಯ ದಾಖಲೆಗಳನ್ನು ಪರಿಶೀಲಿಸಲಾಗಿ, ಕ್ರಿಯಾ ಯೋಜನೆಯ ಅನುಮೋದನೆಯನ್ನು ಪಡೆಯದೇ ₹12,05,032/–ಗಳ ವೆಚ್ಚ ಭರಿಸಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಅಧ್ಯಕ್ಷರಾದ ಕ್ರಮವಾಗಿ, ಶ್ರೀ.ರಾಜಕುಮಾರ್ ಭಜಂತ್ರಿ ಮತ್ತು ಶ್ರೀಮತಿ.ದೀಪಾ ಬಾಯಿ ಕುಲಕರ್ಣಿ ರವರಿಗೆ ನೀಡಿದ ನೋಟೀಸಿನಲ್ಲಿ ಸದರಿಯವರು ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ವೆಚ್ಚವನ್ನು ಮಾಡಲಾಗಿದೆಯೆಂದು ಉತ್ತರವನ್ನು ಸಲ್ಲಿಸಿ, ಲೋಪವನ್ನು ಮನ್ನಿಸಲು ಕೋರಿದ್ದಾರೆ.

4. (1) ಶ್ರೀ.ರಾಜಕುಮಾರ್ ಭಜಂತ್ರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, (2) ಶ್ರೀ.ಎನ್.ಬಿ.ದೇಸಾಯಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, (3) ಶ್ರೀ.ವೀರಪ್ಪ ರಾಮಪ್ಪ ಕಲ್ಮನಿ, ಕಾರ್ಯದರ್ಶಿ ಶ್ರೇಣಿ–2, (4) ಶ್ರೀಮತಿ. ದೀಪಾ ಬಾಯಿ ದಿವಾಕರ್ ಕುಲಕರ್ಣಿ, ಅಧ್ಯಕ್ಷರು ಮತ್ತು (5) ಶ್ರೀ.ಸುನೀಲ್ ಎಫ್ ಬಂಗಾರಿ, ಸದಸ್ಯರು, ಚಿಂಚಲಿ ಗ್ರಾಮ ಪಂಚಾಯತ್ (ಇನ್ನು ಮುಂದೆ, '2 ರಿಂದ 6ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳನ್ನು 2 ರಿಂದ 6ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಗಿದೆ.

5. 2ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

6. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ತಾವು ದಿ:12/09/17 ರಿಂದ 45 ದಿನಗಳು ಮಾತ್ರ ಚಿಂಚಳಿ ಗ್ರಾಮ ಪಂಚಾಯತ್‌ನಲ್ಲಿ ಕರ್ತವ್ಯ ನಿರ್ವಹಿಸಿದ್ದು, ದೂರಿನ ಆಪಾದನೆಗಳು ತಮ್ಮ ಅವಧಿಗೆ ಸಂಬಂಧಿಸಿಲ್ಲವಾದ್ದರಿಂದ, ವಿಚಾರಣೆಯನ್ನು ಕೈಬಿಡಲು ಕೋರಿದ್ದಾರೆ.

7. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ತಾವು ದಿ:15/02/18 ರಂದು ಚಿಂಚಳಿ ಗ್ರಾಮ ಪಂಚಾಯತ್‌ನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದರಿಂದ, ದೂರಿನ ಆಪಾದನೆಗಳು ತಮ್ಮ ಅವಧಿಗೆ ಸಂಬಂಧಿಸಿಲ್ಲವಾದ್ದರಿಂದ, ವಿಚಾರಣೆಯನ್ನು ಕೈಬಿಡಲು ಕೋರಿದ್ದಾರೆ.

BSM/2089/18



8. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ಪಂಚಾಯತ್ ಸಾಮಾನ್ಯ ಸಭೆ ಮತ್ತು ಗ್ರಾಮಸಭೆಯಲ್ಲಿ ಅನುಮೋದಿಸಿದ ನಂತರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಅನುಮೋದನೆಗೆ ಸಲ್ಲಿಸಿದೆ. ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ್ ಪಂಚಾಯತ್, ಗದಗ ರವರಿಗೆ ಈಗಾಗಲೇ ಸಮಜಾಯಿಷಿಯನ್ನು ಸಲ್ಲಿಸಿದೆ. ಮುಂದುವರೆದು, ಆಶ್ರಯ ಮನೆಗಳ ಹಂಚಿಕೆಯಲ್ಲಿ ಹಣದ ಅವ್ಯವಹಾರದ ಆರೋಪಕ್ಕೆ ಸಂಬಂಧಿಸಿದಂತೆ, ದಾಖಲೆಗಳನ್ನು ಸಲ್ಲಿಸಿಲ್ಲ. ಅರ್ಹ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ, ಮುಂದಿನ ಅನುಮೋದನೆಗಾಗಿ ಮತ್ತು ಮಂಜೂರಾತಿಗಾಗಿ ತಾಲ್ಲೂಕ್ ಮಟ್ಟದ ಜಾಗೃತ ಸಮಿತಿಗೆ ಸಲ್ಲಿಸಿದ್ದು, ಅನುಮೋದನೆಗೊಂಡ ನಂತರ ಅನುದಾನ ಬಿಡುಗಡೆಗೆ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಜಿಪಿಎಸ್ ಮೂಲಕ ಮನೆಗಳ ಭೌತಿಕ ನಿರ್ಮಾಣದ ಪ್ರಕಾರ ಎಂಐಎಸ್ ಅನ್ನು ದಾಖಲಿಸಿ ನಿಗಮಕ್ಕೆ ಸಲ್ಲಿಸಿದೆ. ಪರಿಶೀಲನೆ ನಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಅನುದಾನ ಬಿಡುಗಡೆಯಾಗಿದೆ. ದೂರಿನಲ್ಲಿ ಮಾಡಿದ ಆರೋಪಗಳಿಗೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶ ಇರುವುದರಿಂದ, ಸದರಿ ದೂರು ಊರ್ಜಿತವಾಗುವುದಿಲ್ಲ. ಹಣ ದುರುಪಯೋಗದ ವಸೂಲಾತಿ ಬಗ್ಗೆ ಕ್ರಮ ಕೈಗೊಳ್ಳಲು ಶಿಸ್ತು ಪ್ರಾಧಿಕಾರ ಶಿಫಾರಸ್ಸು ಮಾಡಿರುವುದಿಲ್ಲ. ಕಾರಣ, ಪ್ರಕರಣಕ್ಕೆ ಸಂಬಂಧಿಸಿದಂತೆ ಉದ್ದೇಶಿಸಿರುವ ಕ್ರಮ ನ್ಯಾಯ ಸಮ್ಮತವಾಗಿರುವುದಿಲ್ಲವೆಂದು ಹೇಳಿದ್ದಾರೆ.

9. ಆರನೇ (6ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ತಾವು ಗ್ರಾಮ ಪಂಚಾಯತ್ ಸದಸ್ಯರಾಗಿದ್ದು, ಸದರಿ ಗ್ರಾಮದ ಸಾರ್ವಜನಿಕ ಕುಡಿಯುವ ನೀರಿನ ಸರಬರಾಜು ಪೈಪ್‌ಲೈನ್ ದುರಸ್ತಿ ಕಾಮಗಾರಿಗಾಗಿ ಖರೀದಿಸಿದ ಸಾಮಗ್ರಿಗಳ ಬಿಲ್ಲಿನ ಮೊತ್ತವನ್ನು ತಮ್ಮ ಸಹೋದರ ಶ್ರೀ.ಸುಧೀರ್ ಬಂಗಾರಿ ರವರಿಗೆ ನೀಡಿದೆಯೆಂದು ದಾಖಲಾಗಬೇಕಿದ್ದು, ಕಣ್ತಪ್ಪಿನಿಂದ ಬಿಲ್ಲಿನ ಮೊತ್ತ ಚೆಕ್ ಮುಖಾಂತರ ಶ್ರೀ.ಎಸ್.ಎಫ್.ಬಂಗಾರಿ ಎಂದು ಬಟಾವಾಡೆಯಾಗಿದ್ದು, ತಮ್ಮ ಸಹೋದರನ ಖಾತೆಗೆ ಜಮಾ ಆಗಬೇಕಿದ್ದ ಚೆಕ್‌ನ ಮೊತ್ತವು ತಮ್ಮ ಖಾತೆಗೆ ಜಮಾ ಆಗಿರುತ್ತದೆಂದು ಹೇಳಿದ್ದಾರೆ.

10. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1. ಚಿಂಚಲಿ ಗ್ರಾಮ ಪಂಚಾಯತ್‌ಗೆ 2017-18ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯಲ್ಲಿ 1ನೇ ಕಂತಿನ ಅನುದಾನ ₹13,30,608/-ಗಳು ದಿನಾಂಕ:07/07/17ರಂದು ಪಂಚಾಯತ್‌ನ ಖಾತೆಗೆ ಜಮಾ ಆಗಿದೆ. ಅದರ ಬಾಬ್ತು ₹12,05,032/-ಗಳನ್ನು ಕ್ರಿಯಾ ಯೋಜನೆಯ ಅನುಮೋದನೆ ಇಲ್ಲದೇ, ವಿವಿಧ ಕಾಮಗಾರಿಗಳಿಗೆ ಬಳಸಲಾಗಿದೆಯೆಂದು ಆ ಸಮಯದಲ್ಲಿ ದೂರಿನ 2ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು 5ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದಾರೆಂದು 1ನೇ ಎದುರುದಾರರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಗದಗ ರವರಿಗೆ ಸಲ್ಲಿಸಿದ ದಿ:16/01/18ರ ವರದಿಯಲ್ಲಿ ಕಂಡು ಬಂದಿದೆ. ಕ್ರಿಯಾ ಯೋಜನೆ ಅನುಮೋದನೆ ಆಗದೇ ₹12,05,032/- ಬಳಕೆ ಮಾಡಿರುವುದನ್ನು 2 ಮತ್ತು 5ನೇ ಎದುರುದಾರರುಗಳು ಕ್ರಮವಾಗಿ ದಿ:28/05/18 ಮತ್ತು 20/06/18ರಂದು 1ನೇ ಎದುರುದಾರರಿಗೆ ನೀಡಿದ ಸ್ಪಷ್ಟನೆಗಳಲ್ಲಿ ಒಪ್ಪಿಕೊಂಡಿದ್ದಾರೆ;

2. 14ನೇ ಹಣಕಾಸು ಆಯೋಗದ ಅನುದಾನವನ್ನು ವಿನಿಯೋಗಿಸುವ ಮಾರ್ಗಸೂಚಿಗಳ ಕುರಿತು ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 75 ಗ್ರಾಪಸ 2015 ದಿನಾಂಕ:17/03/17ರಲ್ಲಿ ಹೇಳಿದೆ. ಗ್ರಾಮ ಪಂಚಾಯತ್‌ಗಳಿಗೆ ಬಿಡುಗಡೆಗೊಳಿಸಲಾದ ಸಾಮಾನ್ಯ ಮೂಲ ಅನುದಾನಕ್ಕನುಗುಣವಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿ, ಸಂಬಂಧಪಟ್ಟ ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ಅನುಮೋದಿಸುವುದು ಮತ್ತು ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆಯುವುದು ಸದರಿ ಸುತ್ತೋಲೆಯನ್ವಯ ಕಡ್ಡಾಯವಾಗಿದೆ;

3. ಚಿಂಚಲಿ ಗ್ರಾಮ ಪಂಚಾಯತ್‌ಗೆ 2017-18ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯಲ್ಲಿ ಬಿಡುಗಡೆಯಾದ 1ನೇ ಕಂತಿನ ಅನುದಾನ ₹13,30,608/-ಗಳಲ್ಲಿ ₹12,05,032/-ಗಳನ್ನು ಕ್ರಿಯಾ ಯೋಜನೆಯ ಅನುಮೋದನೆ ಇಲ್ಲದೇ, ವಿವಿಧ ಕಾಮಗಾರಿಗಳಿಗೆ ಖರ್ಚನ್ನು ಭರಿಸಿ, 2 ಮತ್ತು 5ನೇ ಎದುರುದಾರರು ಸದರಿ ಸುತ್ತೋಲೆಯಲ್ಲಿನ ನಿರ್ದೇಶನಗಳನ್ನು ಉಲ್ಲಂಘಿಸಿ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ;

4. ಆರನೇ ಎದುರುದಾರರು ಚಿಂಚಲಿ ಗ್ರಾಮ ಪಂಚಾಯತ್‌ನ ಸದಸ್ಯರಾಗಿದ್ದು, ಸದರಿ ಪಂಚಾಯತ್‌ನ ವ್ಯಾಪ್ತಿಯಲ್ಲಿನ ನೀಲಗುಂದ ಗ್ರಾಮದಲ್ಲಿ 2017-18ನೇ ಸಾಲಿನಲ್ಲಿ 14ನೇ

ಹಣಕಾಸು ಯೋಜನೆಯಡಿ ಕುಡಿಯುವ ನೀರಿನ ಸರಬರಾಜು ಪೈಪ್‌ಲೈನ್ ದುರಸ್ತಿ ಕಾಮಗಾರಿಗೆ ಸಂಬಂಧಿಸಿದಂತೆ ₹41,971/–ಗಳ ಬಿಲ್ಲನ್ನು ಚೆಕ್ ಸಂಖ್ಯೆ:325435 ದಿ:04/04/17ರಲ್ಲಿ ಸದರಿಯವರಿಗೆ ನೀಡಿದೆ. ಸದರಿ ಚೆಕ್‌ನ ಬಾಬ್ತು ಮೊತ್ತವು 6ನೇ ಎದುರುದಾರರ ಖಾತೆಗೆ ಜಮಾ ಆಗಿರುತ್ತದೆಂದು ಸದರಿಯವರೇ ಸ್ವತಃ ತಮ್ಮ ಆಕ್ಷೇಪಣೆಯಲ್ಲಿ ಒಪ್ಪಿಕೊಂಡಿರುತ್ತಾರೆ. ದೂರಿನ ಜೊತೆ 1) ಲಕ್ಷ್ಮಿ ಸೇಲ್ಸ್ ಏಜೆನ್ಸೀಸ್‌ನ ರಸೀದಿ ಸಂಖ್ಯೆ:9962 ದಿ:23/12/16 ಮೊತ್ತ ₹23,216/– ಮತ್ತು 2) ರಸೀದಿ ಸಂಖ್ಯೆ:10516 ದಿ:24/12/16 ಮೊತ್ತ ₹9,875/– ಹಾಗೂ 3) ವಿ.ಹೆಚ್.ಹೂವಣ್ಣವರ ಅರ್ಥ್ ಮೂವರ್ಸ್ ರವರ ಬಿಲ್ ಸಂಖ್ಯೆ:114 ದಿ:25/12/16 ಮೊತ್ತ ₹8,880/–, ಸದರಿ 3 ರಸೀದಿಗಳ ಒಟ್ಟು ಮೊತ್ತ ₹41,971/–ಗಳಾಗಿದ್ದು, ಸದರಿ ಎಲ್ಲಾ ಬಿಲ್ಲುಗಳು 6ನೇ ಎದುರುದಾರರ ಹೆಸರಿಗಿದೆ. ಅಂದರೆ, 6ನೇ ಎದುರುದಾರರೇ ಸ್ವತಃ ಸದರಿ ಸಂಸ್ಥೆಗಳಿಂದ ಸಾಮಗ್ರಿಗಳನ್ನು ಖರೀದಿಸಿದ್ದಾರೆಂದು ಹೇಳಬಹುದಾಗಿದೆ;

5. ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ, ಕಲಂ 12(ಹೆಚ್) ರನ್ವಯ ಗ್ರಾಮ ಪಂಚಾಯತಿಯ ಆದೇಶದ ಮೂಲಕ ಮಾಡಿದ ಯಾವುದೇ ಕಾಮಗಾರಿಯಲ್ಲಿ ಅಥವಾ ಗ್ರಾಮ ಪಂಚಾಯತಿಯೊಂದಿಗೆ ಅಥವಾ ಅದರ ಅಧೀನದಲ್ಲಿ ಅಥವಾ ಅದರ ಮೂಲಕ, ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ಉದ್ಯೋಗದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ ಅಥವಾ ಗ್ರಾಮ ಪಂಚಾಯತಿಯ ಪರವಾಗಿ ಯಾವುದೇ ಅಂಥ ಕಾಮಗಾರಿ ಅಥವಾ ಕರಾರನ್ನು ಅಥವಾ ಗ್ರಾಮ ಪಂಚಾಯತಿಗೆ ಸರಕುಗಳನ್ನು ಮತ್ತು ಸೇವೆಗಳನ್ನು ಪೂರೈಸುವುದಕ್ಕಾಗಿ ಯಾವುದೇ ಕರಾರನ್ನು ಪಡೆದುಕೊಳ್ಳುವಲ್ಲಿ ಅಥವಾ ನಿರ್ವಹಿಸುವಲ್ಲಿ ಆತನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಾನಾಗಿಯೇ ಆಗಲಿ ಅಥವಾ ತನ್ನ ಏಜೆಂಟ್, ಪಾಲುದಾರ ಅಥವಾ ನೌಕರನ ಮೂಲಕವಾಗಿಯೇ ಆಗಲಿ ತೊಡಗಿದ್ದರೆ ಆತನು ಪಂಚಾಯತ್‌ನ ಸದಸ್ಯನಾಗಲು ಅನರ್ಹಗೊಳ್ಳುತ್ತಾರೆ;

6. 6ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಪರಿಗಣಿಸಿದ್ದಲ್ಲಿ, ಸದರಿಯವರ ಸಹೋದರ ಶ್ರೀ.ಸುಧೀರ್ ಬಂಗಾರಿ ಪಂಚಾಯತ್‌ನ ಸಾರ್ವಜನಿಕ ಕುಡಿಯುವ ನೀರಿನ ಸರಬರಾಜು ಪೈಪ್‌ಲೈನ್ ದುರಸ್ತಿ ಕಾಮಗಾರಿಯನ್ನು ವಹಿಸಿಕೊಂಡಿದ್ದಾರೆ. ಆದರೆ, ಸದರಿ ಕಾಮಗಾರಿಯ ಬಿಲ್ಲಿಗೆ 6ನೇ ಎದುರುದಾರರು ಸಹಿ ಮಾಡಿದ್ದಾರೆ. ಸದರಿ ಬಿಲ್ಲಿನ ಬಾಬ್ತು ಚೆಕ್ ಮೊತ್ತವನ್ನು 2 ಮತ್ತು 5ನೇ ಎದುರುದಾರರು ಮಂಜೂರು ಮಾಡಿದ್ದಾರೆ. ಪಂಚಾಯತ್‌ನ

ಹೆಸರಿಗಿರದ 3 ಬಿಲ್‌ಗಳ ಬಾಬ್ತು ಮೇಲೆ ಹೇಳಿದ ಚೆಕನ್ನು 6ನೇ ಎದುರುದಾರರ ಖಾತೆಗೆ ಜಮಾ ಮಾಡಿ, 2 ಮತ್ತು 5ನೇ ಎದುರುದಾರರು ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದಲ್ಲದೇ, 6ನೇ ಎದುರುದಾರರ ಸಹೋದರ ನಿರ್ವಹಿಸಿದ್ದಾರೆಂದು ಹೇಳಲಾದ ಕಾಮಗಾರಿಯ ಬಾಬ್ತು ಚೆಕ್ ಮೊತ್ತವನ್ನು ಪಡೆದು 6ನೇ ಎದುರುದಾರರು ಸಹ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ;

7. ಮೇಲೆ ಹೇಳಿದ ಅನುದಾನ ಬಳಕೆ ಮತ್ತು ಹಣ ಪಾವತಿಯಲ್ಲಿ 1, 3 ಮತ್ತು 4ನೇ ಎದುರುದಾರರುಗಳ ಯಾವುದೇ ಪಾತ್ರ ಕಂಡು ಬರುವುದಿಲ್ಲವಾದ್ದರಿಂದ, ಸದರಿ 1, 3 ಮತ್ತು 4ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲಾಗಿದೆ.

11. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 2, 5 ಮತ್ತು 6ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

12. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 2, 5 ಮತ್ತು 6ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಐದು (5) ಮತ್ತು 6ನೇ ಎದುರುದಾರರು ಕ್ರಮವಾಗಿ, ಚಿಂಚಲಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರು ಮತ್ತು ಸದಸ್ಯರಾಗಿದ್ದು ಸದರಿಯವರ ದುರ್ನಡತೆಗೆ ಸಂಬಂಧಿಸಿದಂತೆ, ಸದರಿಯವರುಗಳಿಂದ ₹ 41,971/-ಗಳನ್ನು ವಸೂಲಿ ಮಾಡಲು ಹಾಗೂ ಸದರಿಯವರುಗಳನ್ನು ಸದಸ್ಯತ್ವದಿಂದ ವಜಾಗೊಳಿಸಲು ಸದರಿಯವರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಅಡಿ ಕ್ರಮವಹಿಸಲು ಶಿಫಾರಸ್ಸು ಮಾಡಿದೆ.

14. ಅದಲ್ಲದೆ, 2ನೇ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ,

BSIm/2089/18



ಹಾಗೂ 2ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

15. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

**(ನ್ಯಾಯಾಮೂರ್ತಿ ಎಸ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**